## ನಿಮ್ಮೊಡನೆ

# ಮಹಿಳೆಯರಿಗೆ ‘ಎನ್‌ಡಿಎ’ ತೆರೆದ ಬಾಗಿಲು ‘ಲಿಂಗ ಸಮಾನತೆ’ ದಾರಿಯಲ್ಲಿ ಹೊಸ ಹೆಜ್ಜೆ

ಹೆಣ್ಣಿಗೆ ವಿಶಿಷ್ಟವಾದ ಧಾರಣಾಶಕ್ತಿ, ಸಹನಶೀಲತೆ ಹಾಗೂ ಇಚ್ಛಾಶಕ್ತಿಯ ಎದುರು ಚಂಚಲ ಸ್ವಭಾವದ ಗಂಡಿನ ‘ಪೌರುಷ’ಕ್ಕೆ ಹೆಚ್ಚಿನ ಕಿಮ್ಮತ್ತಿಲ್ಲ. ಯಾವುದೇ ಕ್ಷೇತ್ರದಲ್ಲಿ ಸಮಾನತೆ ಸಾಧ್ಯವಾಗಬೇಕಿದ್ದರೆ ಮೊದಲು ಆ ಕ್ಷೇತ್ರದ ಪುರುಷರ ಮನಸ್ಥಿತಿಯಲ್ಲಿ ಬದಲಾವಣೆ ಆಗಬೇಕಿದೆ.

‘ರಾಷ್ಟ್ರೀಯ ರಕ್ಷಣಾ ಅಕಾಡೆಮಿ’ಯಲ್ಲಿ (‘ಎನ್‌ಡಿಎ’) ಮಹಿಳೆಯರ ಸೇರ್ಪಡೆಗೆ ಅವಕಾಶ ಕಲ್ಪಿಸುವ ಕೇಂದ್ರ ಸರ್ಕಾರ ಮತ್ತು ಸಶಸ್ತ್ರ ಪಡೆಗಳ ನಿರ್ಧಾರ, ಭಾರತೀಯ ಸೇನೆ ಮತ್ತಷ್ಟು ಶಕ್ತಿಯುತಗೊಳ್ಳಲು ಹಾಗೂ ಸಮತೋಲನ ಸಾಧಿಸಲು ಪೂರಕವಾಗಿದೆ. ರಕ್ಷಣಾ ಪಡೆಗಳಲ್ಲಿ ಮಹಿಳೆಯರ ಕಾಯಂ ನೇರ ನೇಮಕಾತಿಗೆ ಅವಕಾಶ ಕಲ್ಪಿಸುವ ನಿರ್ಧಾರ ‘ಲಿಂಗ ತಾರತಮ್ಯ’ ನಿವಾರಣೆಯ ದೃಷ್ಟಿಯಿಂದ ಮಹತ್ವವಾದುದು. ‘ಎನ್‌ಡಿಎ’ ಪ್ರವೇಶದಿಂದ ಮಹಿಳೆಯರನ್ನು ದೂರ ಇರಿಸುವುದು ಸಮಾನತೆಯ ಮೂಲಭೂತ ಹಕ್ಕಿನ ಉಲ್ಲಂಘನೆ ಎನ್ನುವ ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಮಹಿಳೆಯರಿಗೆ ಅವಕಾಶ ನಿರಾಕರಿಸುವ ಮನಸ್ಥಿತಿಯನ್ನು ಬದಲಿಸಿಕೊಳ್ಳುವಂತೆ ಹಾಗೂ ‘ಎನ್‌ಡಿಎ’ ಪ್ರವೇಶಕ್ಕೆ ಸಂಬಂಧಿಸಿದಂತೆ ಸರ್ಕಾರದ ತೀರ್ಮಾನವನ್ನು ಲಿಖಿತವಾಗಿ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಆ ಸೂಚನೆಯ ಪ್ರಕಾರ, ‘ಎನ್‌ಡಿಎ’ಗೆ ಮಹಿಳೆಯರಿಗೆ ಪ್ರವೇಶ ನೀಡಲು ಕೇಂದ್ರ ಸರ್ಕಾರ ಹಸಿರುನಿಶಾನೆ ತೋರಿದೆ.

ಲಿಂಗ ತಾರತಮ್ಯ ನಿವಾರಣೆಯ ಪ್ರಯತ್ನದಲ್ಲಿ ಮುಂಚೂಣಿಯಲ್ಲಿ ನಿಲ್ಲಬೇಕಾದ ಸರ್ಕಾರವೇ, ಸೇನೆಯಲ್ಲಿ ಮಹಿಳೆಯರ ಸೇರ್ಪಡೆಯ ಬಗ್ಗೆ ಮೊದಲಿನಿಂದಲೂ ಹಿಂಜರಿಕೆ ವ್ಯಕ್ತಪಡಿಸುತ್ತಲೇ ಬಂದಿದೆ. ‘ಭಾರತೀಯ ಸೇನೆ’ಗೆ ಮಹಿಳೆ ಪ್ರವೇಶ ಪಡೆಯಲು ದೇಶಕ್ಕೆ ಸ್ವಾತಂತ್ರ್ಯ ಬಂದು ನಾಲ್ಕೂವರೆ ದಶಕಗಳು ಬೇಕಾದವು. ಮಹಿಳೆಯರಿಗೆ ಸಶಸ್ತ್ರಪಡೆಗಳ ಬಾಗಿಲು ತೆರೆದದ್ದು 1992ರಲ್ಲಿ. ಆದರೂ, ಹುದ್ದೆಯಲ್ಲಿ ಮೇಲೇರದಂತೆ – ಕಮಾಂಡರ್ ಸ್ಥಾನಕ್ಕೆ ಬಾರದಂತೆ – ಮಹಿಳೆಯರನ್ನು ತಡೆಯಲಾಗಿತ್ತು. 2010ರಲ್ಲಿ, ಕಮಾಂಡರ್ ಸೇರಿದಂತೆ ಸೇನೆಯಲ್ಲಿನ ಕಾಯಂ ಸೇವೆಯ ಹುದ್ದೆಗಳಿಗೆ ಮಹಿಳೆಯರನ್ನು ನೇಮಿಸಬೇಕು ಎಂದು ದೆಹಲಿ ಹೈಕೋರ್ಟ್ ಆದೇಶಿಸಿತು. ಆ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವ ಮೂಲಕ ಮಹಿಳೆಯರ ಬಗೆಗಿನ ಪೂರ್ವಗ್ರಹವನ್ನು ಕೇಂದ್ರ ಸರ್ಕಾರ ಎಗ್ಗಿಲ್ಲದೆ ಪ್ರದರ್ಶಿಸಿತು. ಹತ್ತು ವರ್ಷಗಳ ವಿಚಾರಣೆಯ ನಂತರ 2020ರಲ್ಲಿ ದೆಹಲಿ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿದ್ದ ಸುಪ್ರೀಂ ಕೋರ್ಟ್, ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಗಳ ಅವಕಾಶಗಳಿಗೆ ಇದ್ದ ಮಿತಿಯನ್ನು ತೆಗೆದುಹಾಕಿತ್ತು.

ಸೇನಾಪಡೆಗಳಿಗೆ ಮಹಿಳೆಯರ ಸೇರ್ಪಡೆಯ ಬಗ್ಗೆ ಮುಕ್ತವಾಗಿರಬೇಕೆಂದು ಸುಪ್ರೀಂ ಕೋರ್ಟ್ ಹೇಳಿದರೂ, ಮಹಿಳೆಯರ ಬಗ್ಗೆ ಸರ್ಕಾರ ಹಾಗೂ ಸೇನಾಪಡೆಗಳು ಮುಕ್ತ ಮನಸ್ಸು ಹೊಂದಿರುವಂತಿಲ್ಲ. ಈವರೆಗೆ ‘ಎನ್‌ಡಿಎ’ ಪರೀಕ್ಷೆ ತೆಗೆದುಕೊಳ್ಳಲು ಮಹಿಳೆಯರಿಗೆ ಅವಕಾಶ ಇರಲಿಲ್ಲ. ‘ಎನ್‌ಡಿಎ’ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮಾತ್ರ ಸೇನೆಯಲ್ಲಿ ಕಾಯಂ ನೇಮಕಾತಿ ಉದ್ಯೋಗಕ್ಕೆ ಅರ್ಹರಾಗುವುದರಿಂದ, ಕಾಯಂ ಹುದ್ದೆಗಳಿಂದ ಮಹಿಳೆಯರು ವಂಚಿತರಾಗುತ್ತಲೇ ಇದ್ದರು. ಈಗ ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದಾಗಿ ಸರ್ಕಾರ ತನ್ನ ನಿಲುವು ಬದಲಿಸಿದೆ. ಪ್ರಧಾನಿ ಮೋದಿ ಅವರು ಸ್ವಾತಂತ್ರ್ಯೋತ್ಸವದ ‘ಅಮೃತ ಮಹೋತ್ಸವ’ ಭಾಷಣದಲ್ಲಿ, ದೇಶದ ಎಲ್ಲಾ ಸೈನಿಕ ಶಾಲೆಗಳಲ್ಲಿ ಬಾಲಕಿಯರಿಗೆ ಪ್ರವೇಶಾವಕಾಶ ನೀಡುವುದಾಗಿ ಪ್ರಕಟಿಸಿದ್ದನ್ನು ಕೂಡ ಸರ್ಕಾರದ ಬದಲಾಗುತ್ತಿರುವ ಮನೋಭಾವದ ಭಾಗವಾಗಿ ಗುರ್ತಿಸಬಹುದು.

‘ನ್ಯಾಯಾಲಯದ ನಿರ್ದೇಶನ ಕಾಯದೆ, ಲಿಂಗ ಸಮಾನತೆಯ ಸಾಧನೆಗಾಗಿ ರಕ್ಷಣಾಪಡೆಗಳು ಸ್ವಯಂಪ್ರೇರಿತ ಕ್ರಮಗಳನ್ನು ಕೈಗೊಳ್ಳಬೇಕು. ದೇಶದ ಗೌರವಾನ್ವಿತ ಪಡೆಗಳು ಲಿಂಗ ಸಮಾನತೆಗಾಗಿ ಕೆಲಸ ಮಾಡಬೇಕು’ ಎನ್ನುವ ಸುಪ್ರೀಂ ಕೋರ್ಟ್ ಮಾತುಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಇವು, ಸೇನಾಪಡೆಗೆ ಮಾತ್ರವಲ್ಲ; ಸಮಾಜದ ಎಲ್ಲ ಕ್ಷೇತ್ರಗಳಿಗೂ ಕಿವಿಮಾತಿನಂತಿವೆ. ಕೌಟುಂಬಿಕ ಹೊಣೆಗಾರಿಕೆ, ಗರ್ಭಧಾರಣೆ, ತಾಯ್ತನದ ಜವಾಬ್ದಾರಿಯಂತಹ ನೆಪಗಳನ್ನು ನೀಡಿ ಹೆಣ್ಣುಮಕ್ಕಳನ್ನು ಉದ್ಯೋಗಕ್ಷೇತ್ರದಲ್ಲಿ ಎರಡನೇ ಆಯ್ಕೆಯನ್ನಾಗಿ ನೋಡಲಾಗುತ್ತಿದೆ. ದೈಹಿಕವಾಗಿ ದುರ್ಬಲಳು ಎನ್ನುವ ಪೂರ್ವಗ್ರಹವೂ ಇದೆ. ವಾಸ್ತವ ಬೇರೆಯದೇ ಇದೆ. ಯಾವುದೇ ಕ್ಷೇತ್ರದಲ್ಲೂ ಗಂಡಿನಷ್ಟೇ ಸಮರ್ಥವಾಗಿ ದುಡಿಯಬಲ್ಲೆ ಎನ್ನುವುದನ್ನು ಹೆಣ್ಣು ಸಾಬೀತುಪಡಿಸಿದ್ದಾಳೆ. ಇನ್ನು ದೇಹಬಲ ಹಾಗೂ ಶೌರ್ಯದ ಮಾತುಗಳು ಭಾವನಾತ್ಮಕವಷ್ಟೇ. ಕುಟುಂಬವನ್ನು ಪೊರೆಯುವಲ್ಲಿ ಹಾಗೂ ಕೃಷಿ ಕೆಲಸಗಳಲ್ಲಿ ಹೆಣ್ಣುಮಕ್ಕಳು ಗಂಡಿಗಿಂತಲೂ ಹೆಚ್ಚು ದುಡಿಯುತ್ತಿರುವಾಗ, ದೇಹಬಲದ ನೆಪ ಹೇಳಿ ಅವಕಾಶವನ್ನು ನಿರಾಕರಿಸುವುದು ಲಿಂಗಭೇದದ ಆಚರಣೆಯೇ ಆಗುತ್ತದೆ. ಹೆಣ್ಣಿಗೆ ವಿಶಿಷ್ಟವಾದ ಧಾರಣಾಶಕ್ತಿ, ಸಹನಶೀಲತೆ ಹಾಗೂ ಇಚ್ಛಾಶಕ್ತಿಯ ಎದುರು ಚಂಚಲ ಸ್ವಭಾವದ ಗಂಡಿನ ‘ಪೌರುಷ’ಕ್ಕೆ ಹೆಚ್ಚಿನ ಕಿಮ್ಮತ್ತಿಲ್ಲ. ಯಾವುದೇ ಕ್ಷೇತ್ರದಲ್ಲಿ ನಿಜವಾದ ಅರ್ಥದಲ್ಲಿ ಸಮಾನತೆ ಸಾಧ್ಯವಾಗಬೇಕಿದ್ದರೆ ಮೊದಲು ಆ ಕ್ಷೇತ್ರದ ಪುರುಷರ ಮನಸ್ಥಿತಿಯಲ್ಲಿ ಬದಲಾವಣೆ ಆಗಬೇಕಿದೆ. ಅಂಥದೊಂದು ಬದಲಾವಣೆಗೆ ‘ಎನ್‌ಡಿಎ’ಗೆ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿರುವ ತೀರ್ಮಾನ ಪೂರಕವಾಗಿದೆ.

■ ರಘುನಾಥ ಚ.ಹ.

